# ಎಚ್ ಎಸ್ ವಿ ಕಾವ್ಯದಲ್ಲಿ ಪುರಾಣ ಪಾತ್ರಗಳು

ನರಸಿಂಹಪ್ಪ
ಸಂಶೋಧನಾ ವಿದ್ಯಾರ್ಥಿ

ಮಾರ್ಗದರ್ಶಕರು: ಡಾ. ಎಸ್. ಶಿವಣ್ಣ

ಭಾರತೀಯ ಸಾಹಿತ್ಯದ ಸಂದರ್ಭದಲ್ಲಿ ಭಾರತೀಯ ಪುರಾಣಗಳು ಪ್ರಮುಖ ಮೂಲವಾಗಿ, ಆಧಾರವಾಗಿ, ತಮ್ಮನ್ನು ತಾವು ತೆರೆದುಕೊಂಡಿವೆ. ಭಾರತೀಯ ಬದುಕಿಗೆ, ಸಾಹಿತ್ಯಕ್ಕೆ ಸ್ಪೂರ್ತಿಯಾಗಿರುವ ಪುರಾಣಗಳು ಅನೇಕ ಕೃತಿಗಳಿಗೆ ವಸ್ತುವಾಗಿವೆ. ಪ್ರಾಚೀನ

ಕನ್ನಡ ಸಾಹಿತ್ಯವಂತು ಪುರಾಣದ ವಸ್ತುವನ್ನು ಒಳಗೊಂಡಿರುವುದನ್ನು. ಪಂಪಭಾರತ ಮೊದಲು ಗೊಂಡು ಮುದ್ದಣನ ಕೃತಿಗಳ ತನಕ ಕಂಡು ಬರುತ್ತದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲು ಪುರಾಣಗಳ ಪ್ರಭಾವ ಗಾಢವಾಗಿರುವುದನ್ನು ಕಾಣಬಹುದು.ಹಾಗೆ ಅನೇಕ ಕೃತಿಗಳನ್ನು ಪಟ್ಟಿ ಮಾಡಬಹುದು. ಕುವೆಂಪು ರಾಮಾಯಣ, ಯುಗಸಂಧ್ಯ, ವೀರಪ್ಪ ಮೊಯಲಿಯವರ ರಾಮಾಯಣ ಕೃತಿಗಳವರೆಗೆ ಈ ಪಟ್ಟಿ ಸಾಗುತ್ತದೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮಹಾಕೃತಿಗಳಿಗೆ ಮಾತ್ರ ಸೀಮಿತವಾಗದೆ ಖಂಡಕಾವ್ಯ, ಕಥನ ಕವನ,ಹಾಗು ಕವನಗಳು ರಚನೆ ಗೊಂಡಿವೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಪುರಾಣದ ಸಂದರ್ಭಗಳು,ಪಾತ್ರಗಳು ಮತ್ತೆಮತ್ತೆ ಸಾಹಿತಿಗಳನ್ನು ಆಕರ್ಷಿಸಿರುವುದನ್ನು ಕಾಣಬಹುದು. ವಿಶೇಷವಾಗಿ ಪುರಾಣದ ರಾಮ ಕೃಷ್ಣರ ಪಾತ್ರಗಳಂತು ಸೃಜನಶೀಲ ಮನಸುಗಳನ್ನು ಹೆಚ್ಚು ಆಕರ್ಷಿಸಿವೆ. ಅಡಿಗರ ರಾಮನವಮಿಯಂತಹ ಕವನಗಳು ಕನ್ನಡಸಾಹಿತ್ಯ ಲೋಕದ ಶಿಖರಾಗ್ರಗಳು. ಪುರಾಣವನ್ನು ಯಥಾವತ್ತಾಗಿಸದೆ ಮುರಿದು ಕಟ್ಟುವ ಕ್ರಿಯೆ ಆಧುನಿಕರಲ್ಲಿ ಸಾಮಾನ್ಯವಾಗಿದೆ.

ಎಚ್ ಎಸ್ ವೆಂಕಟೇಶಮೂರ್ತಿಯವರ ಕಾವ್ಯದಲ್ಲಿ ಪುರಾಣದ ಅನುಸಂಧಾನವನ್ನು ಗುರುತಿಸಬಹುದು.ಪಾರಂಪರಿಕ ಶಕ್ತಿಯನ್ನು ವರ್ತಮಾನಕ್ಕೆ ಒಗ್ಗುವಂತೆ ಮಾಡುವ ಅವರ ಚಿಂತನೆ ಕಾವ್ಯದುದ್ದಕ್ಕೂ ಕಂಡುಬರುತ್ತದೆ. ಈಗಿನ ತಲೆಮಾರಿಗೆ ಅದನ್ನು ತಲುಪಿಸುವ ಜವಾಬ್ದಾರಿಯ್ಯನು ಅಚ್ಚುಕಟ್ಟಾಗಿ ಅವರ ಕಾವ್ಯದಲ್ಲಿ ನಿರ್ವಹಿಸಿದ್ದಾರೆ. ಪಂಪ ಪುರಾಣಕ್ಕೆ ಮೊದಲು ಎದುರುಗೊಂಡರೆ ಎಚ್ ಎಸ್ ವಿ ಪಂಪ ಮತ್ತು ಪುರಾಣಕ್ಕೆ ಎದುರಾಗಿ ಪಾಕ

ಮಾಡಿ ಉಣಬಡಿಸುತ್ತಾರೆ.ಕಾವ್ಯದುದ್ದಕ್ಕೂ ಪರಂಪರೆಯ ಸಂಬಂಧಗಳನ್ನು ಕಾಯ್ದುಕೊಂಡುಬಂದಿರುವ ಎಚ್.ಎಸ್.ವಿ. ಕೂಡ ಕಾವ್ಯದ ಮೂಲಸ್ಥಾಯಿಗೆ ಅಂಟಿಕೊಂಡಿರುವ ಕವಿ. ಎಚ್ ಎಸ್ ವಿ ಯವರಿಗೆ ಪುರಾಣ ನೆನೆಪಾಗಿ ಮಾತ್ರವಲ್ಲದೆ ವರ್ತಮಾನದ ಅನುಭವವಾಗಿ ಪರಿಣಮಿಸಿದೆ.ಪೌರಾಣಿಕ ಸಂದರ್ಭಗಳನ್ನು ಆಧುನಿಕ ಸಂದರ್ಭಗಳಿಗೆ ಸಾಧನಗಳಾಗಿ ಬಳಸಬಹುದೆಂಬುದನ್ನು ಪ್ರಯೋಗಾತ್ಮಕವಾಗಿಮಾಡಿದರು ಇದರ ಫಲವಾಗಿಯೆ ಎಚ್ ಎಸ್ ವಿಯವರು ಅನೇಕ ಪುರಾಣ ಕೇಂದ್ರಿತ ಕವನ ಗಳನ್ನು ರಚಿಸಿದರು.

ಕವಿಯೊಬ್ಬರು ಪರಂಪರೆಯನ್ನು ಅನುಸಂಧಾನಗೊಳಿಸುತ್ತಲೆ ಅದನ್ನು ಸಮಕಾಲೀನಗೊಳಿಸುತ್ತಾ ಬದುಕುವುದು ಸಾಧನೆಯೇ ಆಗುತ್ತದೆ. ಎಚ್ಎಸ್ವಿ ಪರಂಪರೆಯ ಸಿದ್ಧಮಾದರಿಗಳನ್ನು ತೀರ ಬದಲಾಯಿಸಿ ಬರೆಯುವುದಿಲ್ಲ. ಪೌರಾಣಿಕವಾಗಿ ಒಪ್ಪಿತ ಮೌಲ್ಯಗಳನ್ನು ಆಧುನಿಕವಾಗಿ ಚಲಾಯಿಸುವ ಪ್ರಯತ್ನ ಮಾಡುತ್ತಾರೆ. ರಾಮ, ಕೃಷ್ಣ ಬೇರೆಯವರಿಗೆ ಗೂಂಡಗಳಾಗಿ ಅಲ್ಲದವರಾಗಿ ಸಲ್ಲದವರಾಗಿ ಕಂಡರೂ ಎಚ್ಎಸ್ವಿಯವರಿಗೆ ಮೌಲ್ಯಗಳಾಗಿ ಕಂಡಿರುವುದನ್ನು ನಾವು ಗಮನಿಸಬಹುದು. ಡಾ ಎಸ್ ಎಸ್ ಹೇಳುವಂತೆ "ಪೌರಾಣಿಕ ವಸ್ತುಗಳನ್ನು ತೆಗೆದು ಕೊಂಡು ಅವುಗಳನ್ನು ಸಮಕಾಲೀನತೆಗೆ ವಿಭಾವ ಅಥವಾ ವಸ್ತು ಪ್ರತಿ ರೂಪ(ಂಭಿರಿಜಛಿಣುತಜ ಛಿಂಡಿಡಿಜಟಚಿಣುತಜ)ಗಳನ್ನಾಗಿಸುವ ಪ್ರಯತ್ನ ಹೊಸದೇನಲ್ಲ.ಆದರೆ ಆ ವಸ್ತುಗಳನ್ನು ನಿರ್ವಹಿಸುವ ರೀತಿಯೇ ಇಲ್ಲಿ ವಿಶೇಷವಾದದ್ದು"(ಎಚ್ ಎಸ್ ವಿ ಸಮಗ್ರ ಕವಿತೆಗಳು

ಕಾವ್ಯ ತಾನು ಹೊಸತನ ಪಡೆಯುತ್ತಲೆ ಕಾಲವನ್ನು ಹೊಸದಾಗಿಸುತ್ತ, ಕಾವ್ಯಕ್ಕೆ ಎದುರಾಗುವವರಿಗೆ ಹೊಸ ಅನುಭವಗಳನ್ನು ನೀಡುತ್ತಿರುತ್ತದೆ. "ತಿಣಿಕಿದನು ಫಣಿರಾಯ ರಾಮಾಯಣದ ಕವಿಗಳ ಭಾರದಲಿ" ಎಂಬ ಮಾತಿದ್ದರೂ ಕಾಲ ಕಾಲಕ್ಕೆ ಕಾವ್ಯ ರಾಮನ ಮೂಲಕ ತನ್ನ ಹಾಗೂ ಕಾಲದ ಅನುಭವವನ್ನು ಅರಸಿ ಅರಗಿಸಿಕೊಳ್ಳುವುದು ಕಡಿಮೆಯಾಗಿಲ್ಲ. ಪುರಾಣಗಳು ನಮ್ಮ ಸಾಹಿತ್ಯದ ಪ್ರಧಾನ ಮೂಲಗಳು ಎಚ್ಎಸ್ವಿಯವರಿಗೆ ಪುರಾಣಗಳೆ ತನ್ನ ಸಾಹಿತ್ಯದ ಪ್ರೇರಕ ಶಕ್ತಿಗಳಾಗಿವೆ.

ಎಚ್ಎಸ್ವಿಯವರಿಗೆ ರಾಮಾಯಣ, ಮಹಾಭಾರತಗಳನ್ನು ಸಮಕಾಲೀನಗೊಳಿಸಲು ಇರುವ ಮುಖ್ಯ ಕಾರಣವನ್ನು ಟಿ.ಪಿ. ಅಶೋಕರ ಮಾತುಗಳಲ್ಲಿ ಹೇಳುವುದಾದರೆ, " 'ಸಾತ್ವಿಕ' ಮೌಲ್ಯಗಳ ಶೋಧ ಕವಿಯ ಮುಖ್ಯ ಗುರಿ. 'ರಾಜಸ', 'ತಾಮಸ'ಗಳನ್ನು ಅವರು ಗಣನೆಗೆ ತೆಗೆದುಕೊಳ್ಳುವುದಿಲ್ಲವೆಂದಲ್ಲ. ಆದರೆ ಆ ಮೌಲ್ಯಗಳ ವಿಜೃಂಭಣೆ ವೆಂಕಟೇಶಮೂರ್ತಿಯವರ ಕಾವ್ಯದಲ್ಲಿ ತೀರ ಕಡಿಮೆ" (ಎಚ್ಎಸ್ವಿ ಕಾವ್ಯ ಒಂದು ಅಧ್ಯಯನ, ಪುಟ 21)

ರಾಮ, ಕೃಷ್ಣರನ್ನು ಕುರಿತು ಎಚ್ಎಸ್ವಿ ಅನೇಕ ಕವನಗಳಲ್ಲಿ ಬರೆದಿದ್ದಾರೆ. ಅಜ್ಞಾನದಿಂದ ಅರಿವಿನ ಕಡೆ ಸಾಗುವ ವಿಕಾಸ ಕ್ರಮವೆಂದು ಇದನ್ನು ಟಿ.ಪಿ. ಅಶೋಕ್ ವಿವರಿಸುತ್ತಾರೆ. ಸತ್ತ್ವದ ಹುಡುಕಾಟವನ್ನು, ಮುಗ್ಧತೆ, ಕೇಡು ಎರಡರ ದಾಖಲೆಯನ್ನು

ಎಚ್‌ಎಸ್‌ವಿಯವರ ಕಾವ್ಯ ಒಳಗೊಂಡಿದೆ. ರಜ ಮತ್ತು ತಮಗಳು ಏಕಕಾಲಕ್ಕೆ ಶೋಧನೆಯಾಗುತ್ತ ಸಮಗ್ರತೆಯತ್ತ ಕಾವ್ಯ ಚಲಿಸುತ್ತದೆ. ಇಂತಹ ಸಂದರ್ಭಗಳನ್ನು ಶೋಧಿಸಲು ಎಚ್‌ಎಸ್‌ವಿಯವರ ಅನೇಕ ಕವನಗಳನ್ನು ಪರಿಶೀಲಿಸಬಹುದು.

ಕನ್ನಡ ಕಾವ್ಯದಲ್ಲಿ ರಾಮನ ಬಗ್ಗೆ ಇರುವ ಕವನಗಳಲ್ಲಿ ಮೂರನ್ನು ಗುರುತಿಸಿ ಕಾವ್ಯ ಗುರುತುಗಳಾಗಿಸಿದರೆ ಅವು 'ರಾಮಾ' ಆಯನದ ಮೈಲುಗಲ್ಲುಗಳಾಗುತ್ತವೆ. ಮಾಸ್ತಿಯವರ 'ರಾಮನವಮಿ' ಎಂಬ ದೀರ್ಘ ಕವನ, ಅಡಿಗರ 'ರಾಮನವಮಿಯ ದಿವಸ' ಹಾಗೂ ಎಚ್‌ಎಸ್‌ವಿಯವರ 'ಶ್ರೀ ಸಂಸಾರಿ' ಈ ಮೂರು ಕವನಗಳು ಗಾತ್ರದಲ್ಲಿ, ಅರ್ಥದಲ್ಲಿ ರಾಮಕೇಂದ್ರಿತ ಕವನಗಳು. ಮತ್ತು ಕಾಲದ ಪ್ರಾತಿನಿಧಿಕತೆಯಿಂದಲೂ ಮುಖ್ಯವಾಗುತ್ತದೆ. ಹಾಗೆಯೇ ಕವಿಗಳ ಜೀವಿತದ ಕಾಲಾವಧಿಯಿಂದಲು ಮುಖ್ಯವಾಗುತ್ತವೆ. ಮಾಸ್ತಿಯ ಕವನದಲ್ಲಿ ರಾಮ ಸತ್ಯರಾಮನಾಗಿ, ನಂಬಿಕೆಯಾಗಿ ಬರುತ್ತಾನೆ. ನವೋದಯದ ಮಾಸ್ತಿಗೆ ಬದುಕಿನೊಳಗೆ ನಂಬಿಕೆಯಾಗಿ ರಾಮ ಕಾಣುತ್ತಾನೆ. ನವ್ಯದ ಅಡಿಗರಿಗೆ ರಾಮ ಪ್ರತೀಕವಾಗಿ ಕಂಡು 'ರಾಮನವಮಿ ದಿವಸ' ಕವನ ರಾಮ ಮಹಿಮೆಯ

ವಿಶೇಷತೆ ಹೇಳುವುದಕ್ಕಿಂತ ರಾಮ ವಿಶ್ಲೇಷಣೆಯನ್ನು ಹೇಳುತ್ತದೆ. ಅಡಿಗರ ರಾಮಾನುಭವವನ್ನು ಪಡೆಯಲು ಹುತ್ತಗಟ್ಟದೆ ಚಿತ್ತ ಮತ್ತೆ ಕೆತ್ತೀತೇನು

ಪುರುಷೋತ್ತಮನ ಆ ಅಂಥ ರೂಪ–ರೇಖೆ? ಎಂದು ಪ್ರಶ್ನಿಸುತ್ತವೆ. ಪುರಾಣ, ಚರಿತ್ರೆ ಹಾಗೂ ವರ್ತಮಾನಗಳ ಅರಸುವಿಕೆಯನ್ನು ಹೇಳುತ್ತದೆ. ಇಂದು ರಾಮ ಮಾಸ್ತಿಯವರ ಬಾಳನ್ನು ಬೆಳಗಬಲ್ಲ ನಂಬಿಕೆಯ ರಾಮ ಇಲ್ಲವಾಗಿದ್ದಾನೆ. ಅಂತರಂಗದ ಬೆಳಕಿಂದ ಹುಡುಕಿ ವಲ್ಮಿಕತನದಿಂದ ಕಾಣಬೇಕಾದ ಅಡಿಗರ ರಾಮ ಕಾಣೆಯಾದ. ಸಾರ್ವಜನಿಕ ಸ್ಥಳಗಳಲ್ಲಿ ಒಂಟಿಯಾಗಿ, ವ್ಯಗ್ರನಾಗಿ ಕಾಣುವ ರಾಮ, ರಾಮರಾಜಕಾರಣಕ್ಕೆ ವಸ್ತುವಾದ ಇಂತಹ ಸಂದರ್ಭದಲ್ಲಿ ಎಚ್‌ಎಸ್‌ವಿಯವರ 'ಶ್ರೀಸಂಸಾರಿ' ರಾಮ ಮುಖ್ಯವಾಗುತ್ತಾನೆ. 'ಪರಿವಾರದ ರಾಮ'ನ ಚಿತ್ರ ಸಾರ್ವಜನಿಕರಲ್ಲಿ ಕಡಿಮೆಯಾಗಿ ದೇಶದ ಸಮಗ್ರತೆಗೆ 'ಸೇತು'ರಾಮನಾಗಿರಬೇಕಾಗಿದ್ದವನು ಬಿರುಕಿಗೆ ಕಾರಣರಾದ ಸಂದರ್ಭಕ್ಕೆ 'ಶ್ರೀಸಂಸಾರಿ' ಕವನ ಸಕಾಲಿಕವಾಗುತ್ತದೆ.ಈ ಕವನದ ಮೊದಲ ಸಾಲೆ ರಾಮಪೂಜೆಯನ್ನು ಒಪ್ಪುತ್ತದೆ.

'ಶ್ರೀರಾಮನು ತಾನೊಬ್ಬನೆ ಎಲ್ಲೂ ಪೂಜೆಗೊಳ್ಳುವುದು ಕಂಡಿಲ್ಲ ರಾಮನೊಬ್ಬನೆ ಎಂದು

ಎಲ್ಲೂ ಬಾರನು ಪೂಜೆಯ ಮಣೆಗೆ'

ಸಾರ್ವಜನಿಕಗೊಂಡಿರುವ(ಸಿಡಿದಿರುವ) ರಾಮನನ್ನು ಈ ಕವನ ಮಣೆಗೆ ತರುವುದರ ಮೂಲಕ ಮನೆಯ ರಾಮನಾಗಿಸುತ್ತದೆ. ಅಯೋಧ್ಯೆಯ ಆಚೆಯ ರಾಮಗುಡಿಗಳನ್ನು ನೆನಪಿಸುತ್ತ, ಅಯೋಧ್ಯೆಯಲ್ಲೇ ಸಲ್ಲಬೇಕಾದ ಸಾರ್ವಜನಿಕ ರಾಮನನ್ನು ಶ್ರೀರಾಮ ಸಂಸಾರಿ ಕಾವಿ ಹಾಕಿಸಿಕೊಂಡು ಬಿಲ್ಲು ಹಿಡಿದ ರಾಮ ಏಕಮಾತ್ರನಲ್ಲ ಎಂಬುದನ್ನು ಎಚ್‌ಎಸ್‌ವಿ ಕವನ ವಿವರಿಸುತ್ತದೆ.

ಶ್ರೀರಾಮನ ಸಂಸಾರ, ಸೀತೆಯಿಂದ ಮೊದಲಾಗಿ ತಮ್ಮಂದಿರನ್ನು ಒಳಗೊಂಡು ಶ್ರುತಕೀರ್ತಿಯವರೆಗೆ ಕೂಡಿರುತ್ತದೆ. ಆರ್ಯದ್ರಾವಿಡ, ಆದಿವಾಸಿಗಳು ಸೇರಿರುತ್ತಾರೆ. ವಾನರ, ದಾನವ (ವಿಭೀಷಣ) ರು ಕೂಡಿರುತ್ತಾರೆ. “ವರ್ಣ–ವರ್ಗ ವೈಷಮ್ಯ ಲೆಕ್ಕಿಸದೆ ಪೂಜೆಗೊಳ್ಳುತ್ತಿದೆ ಸಂಸಾರ” ಎನ್ನುವುದು ಕವಿಯ ಉದ್ಗಾರ.

ಕರಿಯ ಮುಸುಕಲ್ಲಿ ಬಿಂಬಗ್ರಾಹಿ ಮಂದ್ರದಲ್ಲಿ ಗೊಣಗಿದ ಹೀಗೆ “ಹೆಗಲ ಬಿಲ್ಲ ಕೆಳಗಿಳಿಸಿರಿ ಸ್ವಾಮಿ ಜಾಗ ಉಂಟು ಇನ್ನೊಬ್ಬರಿಗೆ”. ಥಟ್ಟನೆ ನೆನಪು ಸೇತುರಾಮನಿಗೆ

ಮರಳು ಸೇವೆಯ ಅಳಿಲು ಮರಿ. ರಾಮ ಧ್ಯಾನಿಸಿದ ಮರುಕ್ಷಣದಲ್ಲಿ ಅಳಿಲಿದೆ ಆತನ ಹೆಗಲಲ್ಲಿ.

ಪದ್ಯದಲ್ಲಿ ಬರುವ “ಬಿಂಬ (ಋಣಣಠಡಿಚಿಋಜಡಿ) ಗ್ರಾಹಿ ನಮ್ಮೊಳಗಿರುವವನೆ. ಹೆಗಲ ಬಿಲ್ಲ ಕೆಳಗಿಳಿಸಿರಿ ಸ್ವಾಮಿ ಜಾಗ ಉಂಟು ಇನ್ನೊಬ್ಬರಿಗೆ” ಎಂದಾಗ ರಾಮನಿಗೆ ನೆನಪಾಗಿದ್ದು ರಾಮಸೇತುವಿಗೆ ಸಹಾಯ ಮಾಡಿದ ಅಳಿಲು. ರಾಮ ಬಿಲ್ಲು ಇಳಿಸಿ ಅಳಿಲಿಗೆ ಜಾಗ ಮಾಡಿಕೊಟ್ಟಿದ್ದು ಸಾಮಾನ್ಯ ಸಂಗತಿಯೇನಲ್ಲ. ಪ್ರಸ್ತುತ ಬಿಲ್ಲೆತ್ತಿ ಯುದ್ಧ ಸನ್ನದ್ಧನಂತಿರುವ ರಾಮನ ಚಿತ್ರ ನೋಡಿರುವ ನೋಡುತ್ತಿರುವ ನಮಗೆ ರಾಮನ ನಿಜವಾದ ವ್ಯಕ್ತಿತ್ವ ಅರಿವಾಗುತ್ತದೆ. ಬಿಲ್ಲೆತ್ತಿರುವ ರಾಮ ಯಾರದೊ ಸ್ವಾರ್ಥ ತೀರಿಸಲು ಇರುವ ರಾಮ. ಹೆಗಲು ಕೊಟ್ಟ ಅಳಿಲಿಗೆ ಹೆಗಲಿನಲ್ಲಿ ಆಶ್ರಯ ಕೊಟ್ಟ ರಾಮ ನಿಜರಾಮನಾಗಿ ಕಾಣುತ್ತಾನೆ. ಈಗ ಹೊರಗೆ ಒಂಟಿಯಾಗಿ ಬಿಲ್ಲಿಡಿದ ರಾಮನನ್ನು ನೋಡುತ್ತಿರುವ ನಮಗೆ ಹೆಗಲಿನಿಂದ ಬಿಲ್ಲನ್ನು ಇಳಿಸಿ ಅಳಿಲನ್ನು ಕೂರಿಸಿಕೊಂಡಿರುವ ರಾಮ ಅಳಿಲನ್ನು ತನ್ನ ಸಂಸಾರದ ಪರಿವಾರದ ಭಾಗವಾಗಿ ತೆಗೆದುಕೊಂಡಿರುವುದು ವಿಶೇಷವೆನಿಸುತ್ತದೆ. ಅಳಿಲಿನಂತಹ ಚಿಕ್ಕ ಪ್ರಾಣಿಗೆ ಬಲವಾದ ಜಾಗ ಕೊಟ್ಟಿರುವುದು ರಾಮನ ವ್ಯಕ್ತಿತ್ವದ ಸಂಕೇತ. ಲೋಕಸ್ಮೃತಿಯನ್ನು ಬೆಳಗುವುದು ಉತ್ತಮ ಕಾವ್ಯದ ಶಕ್ತಿ. ಉತ್ತಮನಾದ ಕವಿಗೆ ಸ್ಮೃತಿಗೊಂಡಿರುವ ನೆನಪುಗಳನ್ನು ಮತ್ತೆ ಲೋಕಕ್ಕೆ ಕಾಲಕ್ಕೆ ತಕ್ಕ ಹಾಗೆ ಪ್ರಚಲಿತ ಮಾಡುವುದು ಸಾಧ್ಯವಾಗುತ್ತದೆ. ರಾಮ ನಮ್ಮ ಸ್ಮೃತಿಯ ನೆನಪು. ಅದನ್ನು ಅಳಿಲಿನ ಮುಖೇನ ಸಕಾಲಿಕಗೊಳಿಸಿರುವುದು ಎಚ್‌ಎಸ್‌ವಿಯವರ ವಿಶೇಷ. ಎಚ್‌ಎಸ್‌ವಿಯ ಶ್ರೀಸಂಸಾರಿ ಕವನ ರಾಮನನ್ನು ಹೊಸದಾಗಿ ಕಟ್ಟಿಕೊಡುವ ಪ್ರಯತ್ನ ಮಾತ್ರವಲ್ಲ ಕಾವ್ಯಾನುಭವವನ್ನು ಹೊಸದಾಗಿ ಪಡೆಯಲು ಅನುವು ಮಾಡಿಕೊಡುತ್ತದೆ. ಶ್ರೀರಾಮನು ಆ ಮೂಲಕ ಕಾವ್ಯವೂ ಹೊಸ

ಅನುಭವವನ್ನು ನೀಡುತ್ತಾರೆ. ವ್ಯಕ್ತಿಕೇಂದ್ರಿತ ನವ್ಯ ವಿಸ್ತರಣೆಯಾಗಿ ಸಮಾಜ ಕೇಂದ್ರಿತವಾಗುತ್ತದೆ. ಸಂಸಾರ, ಸಮಾಜ, ವ್ಯಕ್ತಿ ಈ ಮೂರು ಸೇರುವ ಸಹಜತೆ ಎಚ್‌ಎಸ್‌ವಿ ಕಾವ್ಯದ ವಿಶೇಷತೆಯಾಗುತ್ತದೆ.

ಎಚ್.ಎಸ್. ವೆಂಕಟೇಶಮೂರ್ತಿಯವರ ಕಾವ್ಯದಲ್ಲಿ ಮರ ಒಂದು ಪ್ರತೀಕ. 'ಶಿಶಿರದ ಪಾಡು', 'ಬೇಸಿಗೆಯಲ್ಲಿ' ಹಾಗೂ 'ವಿಂಧ್ಯಾಟವಿಯಲ್ಲಿ" ಕವಿತೆಗಳಲ್ಲಿ ಬೋಳುಮರ ಹತಾಶೆಯ, ಬದುಕಿನ ಸಂಕೀರ್ಣತೆಯ, ತನಗೂ ತಿಳಿಯದ ಬದುಕಿನ ಸ್ವರೂಪವಾಗಿ

'ಮರ' ಪ್ರತೀಕಗೊಂಡಿದೆ.

ಎಚ್‌ಎಸ್‌ವಿಯವರ 'ಶಿಶಿರದ ಪಾಡು' ಕವನ ಕುವೆಂಪುರವರ 'ವಾಲ್ಮೀಖಿ ಭಾಗ್ಯ' ನಾಟಕವನ್ನು ನೆನಪಿಸುತ್ತದೆ. ಈ ಕವಿತೆಯಲ್ಲಿ ಸೀತೆ ವ್ಯಕ್ತಿಯಾಗಿ ಒಂದು ಪಾತ್ರವಾಗಿ ಚಿತ್ರಿಸಲ್ಪಟ್ಟಿದೆ. ತನ್ನ ಶಕ್ತಿಗೂ ಮಿತಿ ಇದೆ ಎಂಬರಿವು ವಾಲ್ಮೀಕಿಗೆ ಆಗುತ್ತದೆ. ತನ್ನ ಕಾವ್ಯದೊಳಗಿನ ಎಲ್ಲವನ್ನು ನಿಭಾಯಿಸಿದ ಸೀತೆ ಕಾವ್ಯದ ಹೊರಗೆ ಪಡುತ್ತಿರುವ ಸ್ಥಿತಿಗೆ ವಾಲ್ಮೀಕಿ ಮರುಗುತ್ತಾರೆ.

ಕಾಡು ದಾರಿಯು ಮುಗಿದು ಕೊನೆಗೆ ನಗರದ ನಡುವೆ ಲಲಿತ ಮಹಲರಳಿ
ಶ್ರೀರಾಮ ಸೀತೆ ಒಂದಾಗಿ ಕೂಡಿರಲು ಕಂಟವನು ಕೆಳಗಿಟ್ಟೆ
ಹೀಗೇಕೆ ಬಂದೆಯೇ ಲೋಕಮಾತೆ.

ಮಹಾಮುನಿಗಳಿಗೂ ಅರ್ಥವಾಗದ ಬದುಕಿನ ಮರ್ಮವನ್ನುಈ ಸಾಲುಗಳು ವಿವರಿಸುತ್ತವೆ. ಲಲಿತ ಮಹಲಿನಲಿಇರಬೇಕಾದ ಸೀತೆ ಮತ್ತೆ ಕಾಡಿನಲ್ಲಿ ಕಾಣಿಸಿಕೊಂಡಿದ್ದಸೀತಾರಾಮರನ್ನು ಒಟ್ಟು ಮಾಡಿ ಕಂಟವನ್ನು ಕೆಳಗಿಟ್ಟುಕಥೆ ಮುಗಿಸಿದ್ದ ವಾಲ್ಮೀಕಿಗೆ ಕಾಡಿನಲ್ಲಿ ಎದುರಾದ ಸೀತೆ.ಬದುಕಿನ ಅರ್ಥವಾಗದ ಸ್ವರೂಪಕ್ಕೆ ಸಾಕ್ಷಿಯಾಗುತ್ತಾಳೆ.

ವಾಲ್ಮೀಕಿಯು ಸೀತಾ ಪರಿತ್ಯಾಗವನ್ನು ಚಿತ್ರಿಸಿಲ್ಲ ಶ್ಲೋಕದ ಆಚೆಯ ಲೋಕದಲ್ಲಿ ಕವಿಯ ಅಂದಾಜಿಗೂ ಸಿಗದ ಬದುಕಿನ ವ್ಯಾಪ್ತಿ ಇದೆ ಎಂಬುದನ್ನು ಕವಿತೆ ಸೂಚಿಸುತ್ತದೆ

ಕಟ್ಟಡದ ಹೊರಗಡೆಗೆ ಎಂಥ ಬೆತ್ತಲೆ ಬಯಲು
ಅನುಮಾನಗಳ ನೆಳಲು ಸುಳಿಯಬಹುದು

ಎಂಬ ಸಾಲುಗಳು ವಾಲ್ಮೀಕಿಯ ರಾಮಾಯಣದ ಉತ್ತರತೆಯನ್ನು ಹೇಳುತ್ತದೆ.

ಎಚ್‌ಎಸ್‌ವಿ ಕಾವ್ಯವನ್ನು 'ರಾಮನ' ಕಾವ್ಯ ಮತ್ತು ಕೃಷ್ಣನ ಕಾವ್ಯವೆಂದು ಅಧ್ಯಯನಕ್ಕಾಗಿ ವಿಂಗಡಿಸಿಕೊಳ್ಳಬಹುದು. ರಾಮನಷ್ಟೆ ಪ್ರಾಮುಖ್ಯತೆ ಕೃಷ್ಣನಿಗೂ ಇರುವುದನ್ನು ಎಚ್‌ಎಸ್‌ವಿ ಕಾವ್ಯದಲ್ಲಿ ಕಾಣಬಹುದು. ರಾಮಾಯಣ, ಭಾರತಗಳು ಎಚ್‌ಎಸ್‌ವಿಗೆ ಕೇವಲ ಆಕರಗಳಾಗಿಲ್ಲ. ಅವರಿಗೆ ಅವು ಅತ್ಯಂತ ಆಪ್ತವಲಯಗಳಾಗಿವೆ. ರಾಮ ಕೃಷ್ಣರ ವ್ಯಕ್ತಿತ್ವಗಳು ಪುನರ್ ನಿರ್ಮಿತಿಗೆ ಮಾತ್ರವಲ್ಲ ರಾಮಾಯಣ, ಮಹಾಭಾರತದ ಪಾತ್ರಗಳು ಅವರಿಗೆ ಅತ್ಯಂತ ಆಪ್ತವಾಗಿರುತ್ತವೆ. "ಕೇವಲ ಸಮಕಾಲೀನ ಅನುಭವಗಳನ್ನು ನೆಚ್ಚಿಕೊಳ್ಳದೆ ಪುರಾಣದ ಸ್ಮೃತಿಗಳನ್ನು ಮೂರ್ತಿಯವರು ಜಾಗೃತಗೊಳಿಸುವುದು ಪ್ರಾಯಶಃ ಇದೇ ಕಾರಣಕ್ಕಾಗಿ ಮನುಷ್ಯಾನುಭವದ ಹಲವು ನೆಲೆಗಳನ್ನು ಸ್ಪರ್ಶಿಸಲು ಇದರಿಂದ ಸಾಧ್ಯವಾಗಿದೆ". [ಎಚ್‌ಎಸ್ ವೆಂಕಟೇಶಮೂರ್ತಿ ಕಾವ್ಯ ಟಿ.ಪಿ. ಅಶೋಕ್ ಪುಟ 11]

ಟಿ.ಪಿ. ಅಶೋಕರ ಮಾತು ಎಚ್‌ಎಸ್‌ವಿ ಆಲೋಚಿಸುವ ಪೌರಾಣಿಕ ಚಿಂತನೆಗೆ ಪೂರಕವಾಗಿದೆ. ಪುರಾಣ ಪಾತ್ರಗಳ ಜೊತೆಗೆ ಸಲಿಗೆಯಿಂದ ಒಡನಾಡುವ ಅವರು ಪುರಾಣ ಪಾತ್ರಗಳನ್ನು ಕೇವಲ ಮಾನವೀಕರಿಸುವುದಿಲ್ಲ. ಸಮಕಾಲೀನ ಸಂದರ್ಭಗಳ ಔನತ್ಯಕ್ಕಾಗಿ ಪುರಾಣವನ್ನು ಮಾನವೀಕರಣಗೊಳಿಸುವ ಹದವನ್ನು ಅವರಲ್ಲಿ ಕಾಣಬಹುದು. ಇದಕ್ಕೆ ನಿದರ್ಶನವಾಗಿ ಎಚ್‌ಎಸ್‌ವಿ ಯವರ ಆಪ್ತಗೀತೆಯನ್ನು ಅವಲೋಕಿಸಬಹುದು. ಪುರಾಣ ಪಾತ್ರವೊಂದನ್ನು ಸಮಕಾಲೀನಗೊಳಿಸುವುದಲ್ಲ ಸಮಕಾಲೀನ ಸಂದರ್ಭದ ಉನ್ನತಿಗಾಗಿ ಅದನ್ನು ಹೇಗೆ ಅನ್ವಯಗೊಳಿಸಬಹುದೆಂದು ಆಪ್ತಗೀತೆ ವಿವರಿಸುತ್ತದೆ. ಎಚ್‌ಎಸ್‌ವಿಯವರ ಆಪ್ತಗೀತೆ ಶ್ರೀಕೃಷ್ಣನ ಮನಸ್ಸಿನ, ಬದುಕಿನ ಆಪ್ತತೆಯನ್ನು ಹೇಳುತ್ತದೆ. 'ಯಾದವನಾಗಿ' ಕಂಸನ ಹಿಂಸೆಗೆ ಬೇಕಾದ ತಯಾರಿ ಮಾಡಿಕೊಂಡು 'ಕಾದವನಾಗಿ' ಬಾಲ್ಯದ ತುಂಟಾಟಗಳ ಜೊತೆಗೆ ಸಂದೀಪಿನೀ ಮುನಿಯ ಕಾಲಕೆಳಗರಳಿ, ಅಧ್ಯಯನ, ಅಧ್ಯಾಪನ, ಧ್ಯಾನಗಳ ಕಸರತ್ತುಗಳು 'ಶ್ರಾವಕ'ನಾಗಿ ಮಾಡಿದವು.

"ಸೇವೆಯೆಂದರೆ ಸೇವೆ ನಿರಹಂಕಾರಿಯಾಗದೆ ಸಾಗದೆಂದಿಗೂ ನಡು ಬಗ್ಗೆ ನಡೆಸುವೀ

ಕೈಂಕರ್ಯ, ಭೃಗುವಿನ ಕಾಲೊತ್ತುವೆ"

ಎಂದು ಸಾಗುವ ಸಾಲುಗಳು ಕೃಷ್ಣ ತಾನು ಕೈಗೊಂಡ ಸೇವೆಗಳ ನಿರೂಪಣೆಯನ್ನು ಹೇಳುತ್ತವೆ. ಕೃಷ್ಣ ಸೇವೆ ಮಾಡಿದ್ದು ರಾಜರದ್ದಲ್ಲ. ಸೇವಾಮಗ್ನರದ್ದು. ವಿದುರನ ಮನೆಯ ಹಂಚು ಹಚ್ಚಿದ್ದು, ದ್ರೌಪದಿಯ ಅಕ್ಷಯ ಭಾಂಡಿ ತೊಳೆದಿದ್ದು. ಶ್ರೀಕೃಷ್ಣ ರಾಜಸೇವಾಸಕ್ತನಲ್ಲ ಪ್ರಜಾಸೇವಾಸಕ್ತ. ಆದ್ದರಿಂದ ಈತ ಸೇವಕ. ಹೀಗೆ ಕೃಷ್ಣ ಯಾದವನಾಗಿ, ಕಾದವನಾಗಿ, ಶ್ರಾವಕನಾಗಿ,

ಸೇವಕನಾಗಿ ಬದುಕಿನ ಹಲವನ್ನು ಒಂದೆ ವ್ಯಕ್ತಿತ್ವದಲ್ಲಿ ಮೈಗೂಡಿಸಿಕೊಂಡವನು. ಸಂಕೀರ್ಣವಾದ ಬದುಕನ್ನು ಒಂದು ಸಿದ್ಧಾಂತ, ಒಂದು ಮಾದರಿಯ ಮೂಲಕ ಪರಿಪೂರ್ಣವಾಗಿಸಲು ಆಗುವುದಿಲ್ಲೆ ಎಂಬುದನ್ನು ಎಚ್ಎಸ್ವಿ ಈ ಕವಿತೆಯ ಮೂಲಕ ಹೇಳುತ್ತಾರೆ. ಆಗಿ ಹೋಗಿರುವ ಅನೇಕರಲ್ಲಿ ಈ ಬಹುತ್ವ ಇಲ್ಲದಿರುವುದೆ ಅವರೆಲ್ಲ ಕೆಲವರಿಗೆ ಮಾತ್ರ ಸಲ್ಲುತ್ತಾರೆ. ಆ ಮೂಲಕ ಚರ್ಚೆಯ ವಸ್ತುವಾಗುತ್ತಾರೆ.

ಆಪ್ತಗೀತೆ ಐದು ಭಾಗಗಳನ್ನು ಒಳಗೊಂಡಿದೆ. ಮೊದಲ ನಾಲ್ಕು ಭಾಗಗಳು ಪುರಾಣ ಸ್ಮೃತಿಗೆ ಮೀಸಲಾಗಿವೆ. ಐದನೆಯ ಭಾಗ ಪಂಚಮಾಂಕವೆಂದಿರುವುದು ಉಚಿತವೆನಿಸುತ್ತದೆ. ಒಬ್ಬಂಟಿ, ಚಕ್ರ (ಚರಕ) ನೂಲು, ಸತ್ಯಾಗ್ರಹ, ಉಪವಾಸ ಇವುಗಳ ಮೂಲಕ

'ತನ್ನ ತಾನೆ ರಕ್ಷಿಸುವ, ತನ್ನ ತಾನೆ ಸೇವಿಸುವ ತನ್ನ ಮಲವನ್ನು ತಾನೇ ತೊಳೆದು ನಿರ್ಮಲಗೊಳ್ಳುವ

ಪಂಚಮಾಂಕ'

ಎಂದು ಹೇಳುವುದರ ಮೂಲಕ ಕೃಷ್ಣ ಗಾಂಧಿಯನ್ನು ಮುಖಾಮುಖಿಯಾಗಿಸಿ ಪುರಾಣ ವರ್ತಮಾನಗಳ ಮುಖಾಮುಖಿಯಾಗಿಸಿರುವುದು ಇವನ ಹೇಳುತ್ತದೆ. ಕೃಷ್ಣನೆಂದರೆ ತ್ರಿಲೋಕ ಗುರು ಬೋಧಕನೆಂಬ ಆಯಾಮ ಆಲೋಚನೆಯಿಂದ ಭಿನ್ನವಾಗಿ

ಆತ್ಮಾವಲೋಕನ, ಆತ್ಮಾನ್ವೇಷಣೆಯಿರದೆ ಪುರಾಣದ ಅನುಭಾವವನ್ನು ವರ್ತಮಾನದ ಅನುಭವವಾಗಿ ವಿಸ್ತರಿಸುವ ಎಚ್ಎಸ್ವಿ ಕಾವ್ಯಲೋಕಕ್ಕೆ ಆಪ್ತವಾಗುತ್ತಾರೆ.

'ನಿರ್ಗಮನ' ಕವಿತೆ ಎಚ್ಎಸ್ವಿಯವರ ಪ್ರಮುಖ ಗೀತೆಗಳಲ್ಲಿ ಒಂದು. ನಾಡಿನಿಂದ ಕಾಡಿಗೆ ಬರುವ ರಾಮ ಕಾಡಿನಿಂದ ನಾಡಿಗೆ ಹೋಗುವ ಕೃಷ್ಣನ ವಿಚಾರಗಳನ್ನು ಈ ಕವನ ಒಳಗೊಂಡಿದೆ. ಪ್ರತಿಭಾ ಪಲಾಯನ ಸಂಕೇತವಾಗಿ ರಾಮಕೃಷ್ಣರು ಇಲ್ಲಿ

ವರ್ಣಿಸಿಕೊಂಡಿದ್ದಾರೆ. ಪುರಾಣದ ಜೊತೆ ಉಚಿತ ಅನುಸಂಧಾನ ಮಾಡುವ ಎಚ್ಎಸ್ವಿಯವರು ಪುರಾಣಗಳ ಅನುಸಂಧಾನದ ಮೂಲಕವೆ ಜೀವನ ದರ್ಶನ ಮಂಡಿಸುವ ಮಹತ್ವಾಕಾಂಕ್ಷೆಯನ್ನು ತೋರುತ್ತಾರೆ. ಟಿ.ಪಿ. ಅಶೋಕರ ಮಾತನ್ನು ಇಲ್ಲಿ ಉಲ್ಲೇಖಿಸಿ ಹೇಳಬಹುದು. "ಪುರಾಣದೊಳಗಿನ ಅರ್ಥಪೂರ್ಣ ಸೃಜನಾತ್ಮಕ ಅನುಸಂಧಾನದಲ್ಲಿ ತಮ್ಮ ಜೀವನ ದರ್ಶನವನು ಮಂಡಿಸುವ ಮಹತ್ವಾಕಾಂಕ್ಷೆಯನ್ನು ತೋರುತ್ತಿರುವ ಸಮಕಾಲೀನ ಕವಿಗಳಲ್ಲಿ ಎಚ್ಎಸ್ ವೆಂಕಟೇಶಮೂರ್ತಿ ಮುಖ್ಯರು (ಅಂತಃಕರಣ ಪುಟ 107). ಎಚ್ಎಸ್ವಿಯವರು ಪುರಾಣ ಪಾತ್ರಗಳಲ್ಲಿ ಮನುಷ್ಯ ಸ್ವಭಾವದ ವಿವಿಧ ನೆಲೆಗಳನ್ನು

ಕಾಣುತ್ತಾರೆ. ಸಮಕಾಲೀನತೆ, ಇತಿಹಾಸ ಹಾಗೂ ಪುರಾಣಸ್ಮೃತಿಗಳ ತ್ರಿವೇಣಿ ಸಂಗಮದ ಸಂವೇದನೆಯೊಂದು ಎಚ್‌ಎಸ್‌ವಿಯವರ ಕಾವ್ಯ ನಿರ್ಮಿತಿಯಲ್ಲಿ ಕಾಣಬಹುದು.

'ಘಟು ಭೀಮನಿಗೆ' ಎಂಬ ಕವನ ಘಟೋದ್ಗಜ ಭೀಮನ ಮಗನೆಂದು ಮಾತ್ರ ಎಲ್ಲರಿಗೂ ಗೊತ್ತಿದೆ. ಮಹಾಭಾರತದ ಸಂದರ್ಭದಲ್ಲಿ ಅವನ ಪಾತ್ರದ ಬಗ್ಗೆ ಎಲ್ಲರಿಗೂ ತಿಳಿದಿಲ್ಲ. "ರಾಜಕಾರಣದಿ ಕಟ್ಟರ್ಥವಾಗುತ್ತಣ್ಣ ನನಗೆ" ಎಂದು ಭೀಮನಿಗೆ ಹೇಳುವ, "ಹುಟ್ಟಲಿಕಗತ್ಯ ತಂದೆ ಹುಟ್ಟಿದ ಮಗು ಬೆಳೆಯಲಿಕ್ಕಲ್ಲ" ಎಂಬ ವಾಸ್ತವವನ್ನು ಹೇಳಿಯೇ ಬಿಡುತ್ತಾನೆ. ರಾಜಕಾರಣ ಕೀರ್ತಿಗಳು ಮನುಷ್ಯನಿಗೆ ಮುಖ್ಯವಾದಾಗ ಕೌಟುಂಬಿಕ ಸಂಬಂಧಗಳು ಅಮುಖ್ಯವಾಗುತ್ತವೆ. ಕಾಡು ನಾಡಿನ ಸ್ಥಿತ್ಯಂತರಗಳನ್ನು ಗುರುತಿಸಿ ಹೇಳುವ ಘಟೋದ್ಗಜನ ಮಾತುಗಳು ಮುಖ್ಯವಾಗುತ್ತದೆ. "ನಮ್ಮಲ್ಲಿ ಸುಲಿಯುವುದು ಚರ್ಮವನ್ನು, ನಿಮ್ಮಲ್ಲಿ ಹರೆಯದ ಹೆಮ್ಮಕ್ಕಳುಟ್ಟ ಸೀರೆಯನ್ನು" ಎಂದು ಹೇಳುತ್ತ ಎರಡು ಭಿನ್ನ ಜೀವನ ಕ್ರಮಗಳ ವಾಸ್ತವಗಳನ್ನು ಪಟ್ಟಿ ಮಾಡುತ್ತಾನೆ. ಗೊತ್ತುಂಟು ನಮಗೂ ನೀವು ನಗರದ ಮಂದಿ ಈಗಾಗಲೇ ಏನೇನು ನುಂಗಿ ಕುಡಿದಿದ್ದೀರೆಂದು ನೀವು ಎನ್ನುವಾಗ ದ್ವಾಪರದ ಯುಗ ವ್ಯಕ್ತಿಯ ಮಾತುಗಳು ಆ ಯುಗಕ್ಕೆ ಮಾತ್ರ ಸೀಮಿತವಾಗದೆ

ಸಾರ್ವಕಾಲಿಕವಾಗುತ್ತವೆ. ಪುರಾಣ ವರ್ತಮಾನವಾಗುವ ವಿಧಾನವೊಂದು ಎಚ್‌ಎಸ್‌ವಿಯವರ ಕಾವ್ಯದ ಆಯಾಮವಾಗಿ ಕಂಡುಬರುತ್ತವೆ.

ಮಕ್ಕಳಿರಲ್ಲಮ್ಮಾ ಮಕ್ಕಳಾಗಿ ಎನ್ನುವ ಎಚ್‌ಎಸ್‌ವಿಯವರ ಕವನ ಮಹಾಭಾರತ ಕುರುಕ್ಷೇತ್ರ ಮಕ್ಕಳಾಟದಂತೆ ಎಂದು ಅನುಕಂಪದಿಂದ ನೋಡುವುದರ ಮೂಲಕ ಯುದ್ಧ ಅಪ್ರಬುದ್ಧರ ಆಲೋಚನೆಯೆಂಬುದನ್ನು ವಿವರಿಸುತ್ತಾರೆ. ಮಗು ಭೀಮನ ಚೇಷ್ಟೆಯಿಂದಾಗಿ ದುರ್ಯೋಧನನ ತೊಡೆಗೆ ಪೆಟ್ಟಾಗಿರುತ್ತದೆ. ನೋವಿನಿಂದ ನರಳುತ್ತಿರುವ ದುರ್ಯೋಧನನನ್ನು ನೋಡಿ ಯುಧಿಷ್ಠಿರ ಅಳುತ್ತಾನೆ. ದುಃಖಿಸುತ್ತಿರುವ ಧರ್ಮರಾಯನನ್ನು ಗಾಂಧಾರಿ

ಅರೆ! ನೀನ್ಯಾಕೋ ಅಳುತ್ತಿ?
ಇನ್ನು ಮೇಲೆ ಜಗಳ ಆಡಬೇಡಿ ತಿಳಿಯಿತಾ

ಗಾಂಧಾರಿಯ ಮಾತುಗಳು ಮಕ್ಕಳಿಗೆ ಸರಿ, ಬೆಳೆದ ಕೌರವ ಪಾಂಡವರಿಗಲ್ಲ ಎಂಬಂತೆ ಕವನ ವಿವರಿಸಿಕೊಳ್ಳುತ್ತದೆ. ತೊಡೆ ಮುರಿತಕ್ಕೆ ಕಾರಣವಾಗಿರುವ ಭೀಮನಿಗೆ ಪಶ್ಚಾತ್ತಾಪವಾಗಿದೆ. ತನ್ನಿಂದ ತಪ್ಪಾಗಿದೆಯೆಂದು ತಿಳಿಯುತ್ತಾನೆ. ಪ್ರೌಢ ಭೀಮನಿಗಿಂತ ಶಿಶು ಭೀಮ ಪ್ರಬುದ್ಧನಾಗಿ ಕಾಣುತ್ತಾನೆ.

"ದುರೂ ನಾಳೆ

ನೀನು ನೂಕು ನಾನು ಬೀಳುತ್ತೇನೆ ಮರದಿಂದ ಅನ್ನಲು ಮತ್ತೆ

ದುರು ಅಳುತ್ತಾನೆ – ಬೇಡಣ್ಣ ತೊಡೆ ಮುರಿದರೆ ವಿಪರೀತ ನೋಯುತ್ತೆ"

ಎಂದು ದುರ್ಯೋಧನ ಹೇಳಿದ ಮಾತಿನಲ್ಲಿ ಯುದ್ಧ ವಿರೋಧಿ ನಿಲುವುಗಳಿವೆ. ತೊಡೆ ಮುರಿಸಿಕೊಳ್ಳುವವನ ನೋವಿದೆ. ತನ್ನ ನೋವು ಇನ್ನಾರಿಗೂ ಬರಬಾರದು ಎಂಬ ಮನೋಭಾವದ ನಿಲುವುಗಳಿವೆ. "ಹುಟ್ಟುತ್ತಲೆ ಮಕ್ಕಳು ವಿಶ್ವಮಾನವರು, ಬೆಳೆಯುತ್ತ ಅಲ್ಪರಾಗುತ್ತಾರೆ. ಮತ್ತೆ ಅವರನ್ನು ವಿಶ್ವಮಾನವರನ್ನಾಗಿಸುವುದೆ ಶಿಕ್ಷಣ" ಎನ್ನುವ ಕುವೆಂಪು ಮಾತುಗಳು ಇಲ್ಲಿ ನೆನಪಾಗುತ್ತವೆ. ಕೌರವ ಪಾಂಡವರು ಮಕ್ಕಳಾಗಿ ಮಾಡಿದ ಆಲೋಚನೆ, ಪ್ರೌಢತೆಯಲ್ಲಿ ಸೋಲುವುದು ಮಾನವ ಜನಾಂಗದ ದುರಂತವಾಗಿದೆ.

ಪುರಾಣ ಪ್ರಾಧಾನ್ಯತೆ ಎಚ್‌ಎಸ್‌ವಿ ಕಾವ್ಯದ ವಿಶೇಷ. ಪುರಾಣ ಸಂದರ್ಭವೊಂದನ್ನು ಆಪ್ತಗೊಳಿಸಿ ಸಕಾಲಿಕವಾಗಿಸುವುದು ಎಚ್‌ಎಸ್‌ವಿ ರೂಢಿಸಿಕೊಂಡಿರುವ ಕಾವ್ಯ ಧೋರಣೆ.

ಮಹಾಭಾರತವನ್ನು ಮನುಷ್ಯನ ನೆಲೆಯಲ್ಲಿ ವ್ಯಾಖ್ಯಾನಿಸುವ ಈ ಕವನ ಇಂದಿನ ರಾಜಕಾರಣವನ್ನು ನೆನಪಿಸುತ್ತದೆ.

ನಮ್ಮ ಪುರಾಣಗಳ ಮತ್ತೊಂದು ಮೂಲ ರಾಮಾಯಣ. ರಾಮಾಯಣದಿಂದ ಎಚ್‌ಎಸ್‌ವಿಯವರು ಅನೇಕ ಸಂದರ್ಭಗಳನ್ನು ಕಾವ್ಯವಾಗಿಸಿದ್ದಾರೆ. ಅವು ಹೊಸದಾಗಿ ವ್ಯಾಖ್ಯಾನಗೊಂಡಿರುವುದು ಒಂದು ವಿಶೇಷ. 'ಪರಿವರ್ತನೆ' ಎಂಬ ಕವನ ಇದಕ್ಕೊಂದು ಉದಾಹರಣೆ. ರಾಮ ಮತ್ತು ಭರತರನ್ನು ಒಳಗೊಂಡಿರುವುದು ಸಂದರ್ಭದ ನವೀನತೆಗೆ ಸಾಕ್ಷಿಯಾಗಿದೆ. ಹದಿನಾಲ್ಕು ವರ್ಷದ ನಂತರ ಪರಸ್ಪರ ಭೇಟಿಯಾಗುವ ರಾಮ ಮತ್ತು

ಭರತರಿಗೆ ಸಂದರ್ಭ ಹಿಂದಿನಂತೆ ಇಲ್ಲದಿರುವುದು ಅನುಭವಕ್ಕೆ ಬರುತ್ತದೆ. ಮನುಷ್ಯ ಸಹಜ ಸಂವೇದನೆಗಳ ಚಿತ್ರಣ ಇಲ್ಲಿದೆ.

"ಧ್ವನಿ ಕುಗ್ಗಿ ಪೀಚಲು ಹೆಚ್ಚಾಗಿತ್ತು. ಕೊಂಚ ಸೊಂಟದ ಸುತ್ತು ನಗೆಯನ್ನಂಟಿಸಿದಂತಿತ್ತು ಹೊರಗಿಂದೆಳೆತಂದು ಮಾತೇತಕ್ಕೋ ರವಷ್ಟು ಭಾರ."

ವನವಾಸದ ಬಳಲಿಕೆ, ಆಯಾಸಗಳು ರಾಮನನ್ನು ಸೊರಗುವಂತೆ ಮಾಡಿದ್ದವು. ಹಾಗೇ ಭರತನೂ ಕೂಡ. 'ಭರತ ಸಹ ಇರಲಿಲ್ಲ ಭರತನಂತೆ' ಎಂದಷ್ಟೆ ಹೇಳುವ ಕವಿ ರಾಮನಂತಹ ಮಹಾವ್ಯಕ್ತಿತ್ವವನ್ನು ಸೊರಗಿಸಿರುವ ಸಂದರ್ಭ ಭರತನನ್ನು

ಕೂಡ ಕರಗಿಸಿದೆ. ವನವಾಸದ ಸಂದರ್ಭ ರಾಮಭರತಾದಿಗಳು ಮಾತ್ರವಲ್ಲ ಉಬ್ಬಿ ಹರಿಯುತ್ತಿದ್ದ ಸರಯೂ ಕೂಡ ಬಡಕಲಾಗಿದೆ.

ಸುಗ್ಗಿಯ ಸಂಕೇತವಾದ 'ಬಸರಿ'ಮರ ಇವೆಲ್ಲವೂ ಬದಲಾಗಿರುವುದನ್ನು ಕವಿ ಹೇಳುತ್ತಾರೆ.

ರಾಮನ್ನ ಕಳಕೊಂಡಂತೆ ಭರತ, ಕಳಕೊಂಡಂತೆ
ಭರತನ್ನ ರಾಮ, ನಿಂತೆ ಇದ್ದರು .............

ಎನ್ನುವ ಕವನ ಸನ್ನಿವೇಶವೊಂದನ್ನು ನಿರ್ವಹಿಸುವ ರೀತಿ ಹೊಸದಾಗಿದೆ.

"ಪುರಾಣ ಜಗತ್ತಿನೊಡನೆ ಅದು ತನ್ನದೆ ಎಂಬಂತೆ ನಿರಂತರವಾಗಿ ಅನುಸಂಧಾನ ಮಾಡುತ್ತಾ ಬಂದಿರುವ

ವೆಂಕಟೇಶಮೂರ್ತಿಯವರು ಈವತ್ತು ಚಾಲ್ತಿಯಲ್ಲಿರುವ

ಆಧ್ಯಾತ್ಮದ ಪರಿವೇಶವನ್ನೋ ಮುಖವಾಡವನ್ನೋ ಹಾಕದೆ ಹೋಗಿರುವುದು ಗಮನಾರ್ಹ".

[ಕೆ. ಸತ್ಯನಾರಾಯಣ, ಅಂತಃಕರಣ ಪುಟ 52].

ಕೆ. ಸತ್ಯನಾರಾಯಣರವರು ಎಚ್‌ಎಸ್‌ವಿಯವರು ಪುರಾಣ ಜಗತ್ತಿನೊಡನೆ ಹೊಂದಿರುವ ಭಾವನಾತ್ಮಕ ತಾದ್ಯಾತ್ಮತೆಯನ್ನು ವಿವರಿಸುತ್ತಾರೆ. ಪುರಾಣದ ಸಂದರ್ಭಗಳು, ಪಾತ್ರಗಳು ತಮ್ಮವೆ ಎಂದು ಪರಿಭಾವಿಸಿ, ಅವುಗಳಲ್ಲಿನ ಒಳಿತನ್ನು ಒಪ್ಪುತ್ತ, ಕೆಡುಕನ್ನು ಕೆದಕುತ್ತ, ವಿಶ್ಲೇಷಿಸುವ ರೀತಿಯನ್ನು ಗುರುತಿಸುತ್ತಾರೆ. ಎಚ್‌ಎಸ್‌ವಿಯವರ 'ನಿರ್ಗಮನ' ಕವನ ಗಮನಿಸಿದಾಗ ಮೇಲಿನ ಮಾತುಗಳು ನೈಜವಾಗಿವೆ. ಪುರಾಣ ಜಗತ್ತು ಸೇರಿದಂತೆ ಗತಕಾಲ ಅಂದಿಗೆ ಮುಗಿದಿಲ್ಲ, ಅದು ವರ್ತಮಾನ, ಭವಿಷ್ಯತ್ತನ್ನು ವ್ಯಾಪಿಸುತ್ತದೆ ಎಂಬ ನಂಬಿಕೆಯಿಂದಲೆ ಎಚ್‌ಎಸ್‌ವಿ ಬರಹ ತುಂಬಿಕೊಂಡಿದೆ. ಪುರಾಣ, ಚರಿತ್ರೆಯಾಗಿ, ಚರಿತ್ರೆ, ವರ್ತಮಾನವಾಗಿ, ಆ ವರ್ತಮಾನ, ಭವಿಷ್ಯವಾಗಿ ಪರಿಣಮಿಸುತ್ತದೆ ಎಂಬುದು ಎಚ್‌ಎಸ್‌ವಿ ಕಂಡುಕೊಂಡಿರುವ ಕಾಲಜ್ಞಾನವಾಗಿದೆ.

ರಾಮ, ಕೃಷ್ಣರು ಕಳೆದರೀ ಪರಿ ತಮ್ಮ ಬಾಳಿನ ಗರಿಷ್ಠ ಭಾಗ ಹುಟ್ಟೂರು
ಬಿಟ್ಟು ಆಗಿ ಪರದೇಶವಾಸಿ

ಇಂದಿನ ಪ್ರತಿಭಾ ಪಲಾಯನಗಳ ವಿವರಗಳಿರಬಹುದು. ಅಷ್ಟಕ್ಕೆ ಇದನ್ನು ಸೀಮಿತ ಮಾಡಲಾಗುವುದಿಲ್ಲ. ರಾಮ, ಕೃಷ್ಣರಿಗೆ ತಮ್ಮ ನೆಲೆಗಳನ್ನು ಬಿಟ್ಟು ಹೊರಡುವ ಅನಿವಾರ್ಯತೆಗಳಂತೆ ಈಗಿನವರಿಗೂ ಇದೆ.

ಮುಗ್ಧ ಗೋಕುಲದಿಂದ ಮಥುರೆಗೆ ಹೊರಟ ಕೃಷ್ಣ, ಅಯೋಧ್ಯೆಯಿಂದ ದುರ್ಭೇದ್ಯ ದಂಡಕಕ್ಕೆ ಹೊರಡುವ ರಾಮನ ಹಾಗೆಯೆ ಹೊರಡಬೇಕಿದೆ ಇಂದಿನವರು.

ಪುರಾಣವನ್ನು ವರ್ತಮಾನವಾಗಿಸುವ ಎಚ್ಎಸ್ವಿಯವರ ಪ್ರಯತ್ನ ಇಲ್ಲಿ ಸಾರ್ಥಕವಾಗಿದೆ. ಪುರಾಣವೆಂದರೆ ಒಂದು ಕಲ್ಪಿತ, ಅತಾರ್ಕಿಕ, ಕೇವಲ ರಂಜನೀಯವಾಗದೆ ವರ್ತಮಾನದ ಜೀವನ ಕ್ರಮದಲ್ಲಿ ಅಡಗಿರುವ ಮೂಲಸೆಲೆಗಳನ್ನು ಶೋಧಿಸುವುದು ಎಚ್ಎಸ್ವಿಯವರ ಕಾವ್ಯ ಪ್ರಾಧಾನ್ಯತೆ ಆಗುತ್ತದೆ. ನಿರಂತರ ಪ್ರಯೋಗ ಶೀಲರಾಗಿ ಪ್ರತಿಮೆಗಳ ನಿರ್ಮಾಣದಲ್ಲಿ ಹೊಸ ಹೊಸ ಅನ್ವೇಷಣೆಗಳನ್ನು ಮಾಡುವ ಎಚ್ ಎಸ್ ವಿಯವರಿಗೆ ಬದುಕನ್ನು ಒಟ್ಟಾರ್ಥದಲ್ಲಿ ನೋಡುವ ಪೂರ್ಣದೃಷ್ಟಿಯೆಆಗಿದೆ.ಹೊರತು ಪುರಾಣ ಸಂದರ್ಭಗಳನ್ನು , ಪಾತ್ರಗಳನ್ನು ಪುನಃ ಸೃಷ್ಟಿಸುವ ವ್ಯಸನವಲ್ಲ.